Regd No B G 155

48 th Year
ನೇ ವರ್ಷ
★
Sri 'Satyavadi'
— DAILY —
MYSORE

ಸತ್ಯವಾದಿ

ಸತ್ಯವಾದಿ ಪತ್ರಿಕೆಯು ಅಂದಾನೆ ಪಂಸ್ಕೆದಾರ್ ಎಂ ವಿ ಸ್ಬ್ಬಂಕಾಯುರು ' 2ಸೈ]

6—1—1965

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 10 ನಯೈ

Protect the Cow
ಗೋಸಂರಕ್ಷಣೆ ಮಾಡಿ

ಗುಪ್ತ ಅಧಿವೇಶನ

ಚೀನಾವು ಅಣು ಬಾಂಬು ಸಿಡಿಸಿದ ಹಿನ್ನೆಲೆಯಲ್ಲಿ, ಭಾರತ ಅಣು ಬಾಂಬು ತಯಾರು ಮಾಡಬೇಕೆ ಅಥವಾ ಬೇಡವೇ ಎಂಬ ವಿಚಾರದಲ್ಲಿ ಲೋಕಸಭೆ ಅಧಿವೇಶನ ಕರೆಯಬೇಕೆಂಬ ವಿಷಯಕ್ಕೆ ಅಧ್ಯಕ್ಷ ರಾಧಾಕೃಷ್ಣನ್ ಒಪ್ಪಿಬಹುದೆಂದು ಗಾಂಧಿನಗರದಿಂದ ಬಂದ ವಾರ್ತೆ ತಿಳಿಸುತ್ತದೆ

ಇಳಿತಾಯ

ಕುಟುಂಬ ಕಾರ್ಡುಗಳ ಮೂಲಕ ಅಕ್ಕಿ ತೆಗೆದುಕೊಳ್ಳುವುದು ಈಗ ಹದಿನೈದು ದಿನಗಳಿಂದ ಕಡಿಮೆ ಆಗಿರುವುದೆಂದು ಮದರಾಸು ವಾರ್ತೆ. ಕಳೆದ ಒಂದು ವಾರದಲ್ಲಿ ಶೇಕಡ ಮೂವತ್ತರಷ್ಟು ಕಡಿಮೆ ಆಗಿದೆ ಕೊಯಮತ್ತೂರಿನಲ್ಲೂ ಇದೇ ರೀತಿ ಇಳಿದಿದೆ ಒಂದಂಗ ವೇಟೆಯಲ್ಲಿ ಉತ್ಪನ್ನವಾದ ಅಕ್ಕಿ ದೊರೆಯುತ್ತಿರುವುದೇ ಇದಕ್ಕೆ ಕಾರಣ.

ಅನುಮತಿ

ಮುಂದಿನ ಜನವರಿ 26 ರದನಂತರ ಕೇಂದ್ರ ಶಾಸನ ಸಭೆಯಲ್ಲಿ ಇಂಗ್ಲೀಷು ಭಾಷೆ ಉಪಯೋಗಿಸಲು ಭಾರತ ಅಧ್ಯಕ್ಷರು ಅಜ್ಞೆ ಮಾಡಲಿರುವರು.

ಬೊಂಬಾಯಿನಲ್ಲಿ ಬೋಗಿ ಗುಂಪಿನ ಶಾಲೆಯಲ್ಲಿ 7 ಮಂದಿ ಗಾಯಗೊಂಡರು.

ಜಿಂಗಾಳ ದೆಸೆಯಿಂದ-ಸಿಂಹಳ-ಭಾರತದ ಅಂಚೆ ಸಾಗಾಣಿಕೆಗೆ ತೊಂದರೆ ಇಲ್ಲ

ಸತ್ಯಕ್ಕೆ ಶರಣಾಗಿ ಎಂದು ಶ್ರೀ ಅರವಿಂದಾಶ್ರಮದ ನೂತನ ಪೂರ್ಣ ವರ್ಷದ ಸಂದೇಶ ಕೊಟ್ಟಿದ್ದಾರೆ.

ಪಾಳೆಯು ಪಂಚಾಂಗ

ದೈವಜ್ಞ ಶಿಖಾಮಣಿ
ಅನಾಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ
ರಾಜಜ್ಯೋತಿಷ್ಯ, ಜ್ಯೋತಿರ್ವಿದ್ವನ್ಮಣಿ
ಉಪಶ್ಲೋಕ ಜ್ಯೋಯಿಸಂವರಿಂದ
7 ಗುರುವಾರ ಪೌಷ ಶುಷ್ಕಪಕ್ಷ

ಸಮ್ಮೇಳನ

ನವ ದೆಹಲಿಯಲ್ಲಿ ಏಪ್ರಿಲ್ 24 ರಿಂದ 26 ರವರೆಗೆ ಮೂರು ದಿನಗಳ ಪರಿಂತ ಹಿಂದೂ ಸಮ್ಮೇಳನ ನಡೆಯುವುದಾಗಿ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಬ್ಯಾನರ್ಜಿಯವರು ತಿಳಿಸಿದ ಎ. ಹಿಂದೂ ಜೀವನ ಮೂಲಕ ಪ್ರಚಾರ ಮಾಡುವುದಾಗಿ ಅವರು ನುಡಿದರು

ಪ್ರೋತ್ಸಾಹವಿಲ್ಲ

ಜನತೆಯು ಪ್ರೋತ್ಸಾಹ ಸಿಗದ ಕಾರಣ 7 ಸಾವಿರ ಸಂತಾನ ನಿರೋಧ ಪದಾರ್ಥಗಳನ್ನು ಹೊಂಗೆಸೆಯಬೇಕಾಗಿ ಬಂತೆಂದು ಬಿಹಾರಿನ ಸಂದ್ರಿ ಖಾತೆಯ ಮಂತ್ರಿ ಶ್ರೀಮತಿ ಸುಮಿತ್ರಾ ದೇವಿಯವರು ಧನಬಾದಿನಲ್ಲಿ ತಿಳಿಸಿದರು.

ಅದಕ್ಷತೆ

ಮೈಸೂರಿನಲ್ಲಿ ರಾಗಿ ಹಾಗೂ ಅಕ್ಕಿ ಅಭಾವವಾಗಲು ಸರ್ಕಾರದ ಅದಕ್ಷತೆ ಕಾರಣವೆಂದು ಮಾಜಿ ಮುಖ್ಯ ಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರು ಇತ್ತೀಚೆಗೆ ಹಾಸನದಲ್ಲಿ ತಿಳಿಸಿದರು

ಸಮಿತಿ ರಚನೆ

ಅಖಿಲ ಭಾರತ ಕೈ ಕಸುಬು ಸಮಿತಿ ಹೆಸರು ಭಾರತ ಸರ್ಕಾರ ಮಂತ್ರಿ ಪುನರ್ರಚನೆ ಮಾಡಿದೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಅಧ್ಯಕ್ಷರಾಗಿ ಮುಂದವರಿಯುವರು

★

ಕೇರಳ ರಾಜ್ಯದ ಸ್ವತಂತ್ರ ಕಲ್ಲು ಶಾಸನ ಸಭೆಗೆ ಮೂವತ್ತೊಂದು ಮಂದಿಯನ್ನು ನಿಲ್ಲಿಸುವುದಾಗಿ ಕಲ್ಲಿಕೋಟಿ ವಾರ್ತೆ.

ಕೇರಳ ವಿಧಾನ ಸಭೆ ಚುನಾವಣೆಗೆ ಭಾರತೀಯ ಜನಸಂಘ ಹತ್ತು ಮಂದಿ ಉಮೇದುವಾರರನ್ನು ನಿಲ್ಲಿಸುವುದಾಗಿ ಹೈದರಾಬಾದಿನಿಂದ ವಾರ್ತೆ ಬಂದಿದೆ

ಸಮ್ಮೇಳನ ನಿರ್ಧಾರ

ಮೊಗಾದಿಶುವಿನಲ್ಲಿ ಸಮಾವೇಶವಾಗಿದ್ದ ಅಂತಿಮ ವಿಶ್ವ ಮುಸ್ಲಿಂ ಕಾಂಗ್ರೆಸ್ಸು ಮುಸ್ಲಿಂ ರಾಜ್ಯಗಳಲ್ಲಿರುವ ಸರ್ವಕಿಶ್ಚಿಯನ್ ಸಂಸ್ಥೆಗಳನ್ನು ಸರ್ಕಾರವು ವಹಿಸಿಕೊಳ್ಳುವಂತೆ ನಿರ್ಣಯಿಸಲಾಯಿತು.

ಅಸಂತುಷ್ಟಿ

ವಿಶ್ವಸಂಸ್ಥೆಯನ್ನು ಬೆಂಬಲಿಸುವ ಅತಿಯಾದ ಕಾರ್ಯವನ್ನು ತೆಗೆದುಕೊಳ್ಳುವುದರಲ್ಲಿ ಇಂಡೋನೇಷಿಯಾ ವ್ಯಾಪಾರದಲ್ಲಿ ಭಾರತ ಅಸಂತುಷ್ಟಿ ಆಗಿದೆ.

ಕಣ್ಣು ಬಂತು

ಕುರುಡಾದ ದೃಷ್ಟಿ ಪರಿವರ್ತಿಸಲು ಕಾರ್ನಿಯಲ್ ಟ್ರಾನ್ಸ್‌ಪ್ಲಾಂಟೇಷನ್‌ಗಾಗಿ ವಂಜಾಗಡ್ಡೆಯಲ್ಲಿ ರಕ್ಷಿಸಲಾದ 4ಕಣ್ಣುಗಳು ಡೆಟ್ರಾಯಿಟ್ಟಿನಿಂದ ಭಾರತಕ್ಕೆ ವಿಮಾನದಲ್ಲಿ ಬಂದವು.

ಲೋಕಸಭೆ

ಲೋಕಸಭೆಯು ಅಧಿವೇಶನ ಬರುವ ತಿಂಗಳು 17 ರಂದು ಸಮಾವೇಶವಾಗುವುದಾಗಿ ನವ ದೆಹಲಿ ವಾರ್ತೆ ತಿಳಿಸುತ್ತದೆ.

★

ಅಂತರಾಷ್ಟ್ರೀಯ ನೂರನೇ ಚಲನಚಿತ್ರ ಉತ್ಸವವನ್ನು ಭಾರತ ಅಧ್ಯಕ್ಷ ಡಾ॥ ರಾಧಾಕೃಷ್ಣನರು ಶುಕ್ರವಾರ ನವ ದೆಹಲಿಯಲ್ಲಿ ಆರಂಭವಾಗಲಿದ್ದು ದೇಶ ವಿದೇಶಗಳ ಚಿತ್ರಗಳು ಪ್ರದರ್ಶಿತವಾಗುವುವು 63 ನೆಯ ವರ್ಷದಿಂದೀಚೆಗೆ ತಯಾರಾದ ಯಾವ ಸ್ಪರ್ಧೆಯಲ್ಲೂ ಭಾಗವಹಿಸದ ಚಿತ್ರಗಳು ಇದರಲ್ಲಿ ಭಾಗವಹಿಸಲು ಅರ್ಹವಾಗಿವೆ ಇತರ ಪಟ್ಟಣಗಳಲ್ಲಿ ಪ್ರದರ್ಶಿತವಾಗುವ ಈ ಚಿತ್ರಗಳಿಗೆ ಮನರಂಜನೆ ತೆರಿಗೆಯಿಂದ ವಿನಾಯಿತಿ ಇದೆ ಭಾಗವಹಿಸುವ ಚಿತ್ರಗಳಿಗೆ ಅರ್ಜಿಯು ಮೇಲೆ ಬಹುಮಾನವಿದೆ

ಆಕ್ಕಿ ಬೆಳೆಗೆ

ಮೈಸೂರು ರಾಜ್ಯದ ಶಿವಮೊಗ್ಗಾ, ಮೈಸೂರು ಜಿಲ್ಲೆ ಹಾಗೂ ಕೊಡಗುಗಳನ್ನು ತೀವ್ರ ಅಕ್ಕಿ ಉತ್ಪಾದನೆಗೆ ಭಾರತ ಸರ್ಕಾರ ಆರಿಸಿದೆ

ಸ್ಥಾಪನೆ

ಕಲ್ಕತ್ತಾ ಬಳಿ ನಾಡಿಯಾದಲ್ಲಿ ತೈಲ ಶುದ್ಧೀಕರಣ ಯಂತ್ರವನ್ನು ಭಾರತ ಸರಕಾರ ಸ್ಥಾಪಿಸಲಿದೆ ಅದರಲ್ಲಿ ಇಪ್ಪತ್ತು ನಾಲ್ಕು ಲಕ್ಷ ಟನ್ ಉತ್ಪಾದನೆ ಆಗುವದು

ರೇಷನಿಂಗು

ಕಲ್ಕತ್ತಾದಲ್ಲಿ ಶಾಸನ ಒದ್ದ ಪಡಿತರ ಜಾರಿಗೆ ಬಂದಿತು

ಚುನಾವಣೆ ಮುಂದಕ್ಕೆ

ಕೇರಳ ಚುನಾವಣೆ ಎಂಡೋಫಾಂಗಳ ವರಗೆ ಮುಂದಕ್ಕೆ ಹೋಗುವ ಸಂಭವ ವಿದೆ

★

ಕಲ್ಕತ್ತಾದಲ್ಲಿ 10 ಲಕ್ಷ ಸಂಖ್ಯೆ ರೇಷನ್ನು ಕಾರ್ಡುಗಳಿರುವ ವಂದಿ ಇದೆ

★

ಈ ತಿಂಗಳ 15 ರಂದು ನಾಗ್ಪುರದಲ್ಲಿ ನಡೆಯುವ ರಾಷ್ಟ್ರೀಯ ಸ್ವಯಂಸೇವಕ ರ್ಯಾಲಿಗೆ ಸೇವಾಳ ದೊರೆಗಳು ಬರುವ ಸಂಭವವಿಲ್ಲ

★

ಪ್ರಖ್ಯಾತ ಕವಿ ಆಲಿಯಟ್‌ರು ತಮ್ಮ 76 ನೇ ವರ್ಷದಲ್ಲಿ ವಿನ್ಸೆಂಟ್ ಅರ್ಡಿನ್ ಪತ್ನಿ ಮೋಹನಹೊಂದಿದರು

★

ಶ್ರೀ ಟಿ ಎ ಪೈರವರು ಜೈಂಗಳೂರಿನಲ್ಲಿ ಪತ್ರಿಕಾ ಸಂಮೇಳನದಲ್ಲಿ ಪಾಕಿಸ್ತಾನಕ್ಕೆ ಅಮೆರಿಕಾ ಧಾನ್ಯ ವ್ಯಾಪಾರವನ್ನು ಕಾಸು ತೆಗೆದುಕೊಳ್ಳಲು ಅಮೆರಿಕಾ ಕಾರ್ಪೊರೇಷನ್ ಒಂದಿದೆ ಎಂದು ತಿಳಿಸಿದರು

ವಿವಿಧ ವಿಷಯಗಳು

ಪ್ರಪಂಚದ ಒಡೆತನದಲ್ಲಿರುವ ಕಲ್ಲಿದ್ದಲು ಗಣಿಗಳನ್ನು ಒಂದುಗೂಡಿಸುವ ಯೋಜನೆ ಮತ್ತೆ ಫ್ರಾನ್ಸ ಸರ್ಕಾರದ ಪರಿಶೀಲನೆಯಲ್ಲಿದೆ

❋

ಎಂಡದಿಂದ ನಾಲ್ಕು ಅಂಗುಲಗಳ ವರಿಗೆ ಕಾಶ್ಮೀರ ಕಣಿವೆಯಲ್ಲಿ ಮಂಜು ಕವಿದಿದ್ದಿತು

★

ನವದೆಹಲಿ— ಭಾರತ ಸಿಲೋನುಗಳ ನಡುವೆ ರೈಲು ಹಾಗೂ ದೋಣಿ ಮೂಲಕ ಇದ್ದ ಸಂಚಾರ ಸಾಗಾಣಿಯ ಸಂಪರ್ಕ ರದ್ದಾಗಿರುವ ಪ್ರಯುಕ್ತ ಸಿಲೋನಿಗೆ ಕಾಗದಪತ್ರಗಳನ್ನು ಹಡಗುಗಳ ಮೂಲಕ ರವಾನಿಸಲಾಗುತ್ತಿಲ್ಲ.

★

ಮುದಂತಿನಲ್ಲಿರುವ ಕೇಂದ್ರ ಆಹಾರ ಇಲಾಖೆಯು ರೇಜಸಲು ಡೈರೆಕ್ಟರರ ಕಚೇರಿಯ ಗೋಡೌನು ಗುಮಾಸ್ತೆಯು ವೈವೆಂಟು ಸೀಟುಗಳಲ್ಲಿ ಕಡಮೆಯಾಗ ನಮೂದಿಸಿ ಭ್ರಷ್ಟಾಚಾರದಲ್ಲಿ ತೊಡಗಿದ್ದುದಕ್ಕಾಗಿ ಆಕೆಯ ಬಡ್ತಿಯನ್ನು ಆರು ತಿಂಗಳವರೆಗೆ ತಡೆಹಿಡಿಯಲಾಗಿದೆ ; ಇದೇ ಶಿಕ್ಷೆ 391 ಕೆ ಜಿ ಗಳಷ್ಟು ಹೆಚ್ಚು ಗೋಧಿಯನ್ನು ಕೊಟ್ಟ ಒದೇ ಕಚೇರಿಯ ಜೂನಿಯರು ಗೋಡೌನ್ ಕೀಪರ ಮೇಲೆ ವಿಸ್ತಾರ ಕ್ರಮ ಕೈಗೊಳ್ಳಲಾಗಿದೆ.

❋

ಭಾರತದಲ್ಲಿ ವರ್ಷಕ್ಕೆ 300 ಕ್ಕೂ ಹೆಚ್ಚು ಚಲಚಿತ್ರಗಳು ತಯಾರಾಗುತ್ತಿವೆ : ಅದಕ್ಕೂ ಹೆಚ್ಚು ಚಲಚಿತ್ರಗಳು ಇಲ್ಲಿ ಪ್ರದರ್ಶನಕ್ಕೆ ಬರುತ್ತಿವೆ — ವೈಶ್ವ ಪತ್ರಿಕೆಗಳೂ ಪುಸ್ತಕಗಳೂ ಹಾಗೂ ರೇಡಿಯೋಗಳೂ ಒಟ್ಟಿನೇರಿ ಬೀರುವ ಪ್ರಭಾವಕ್ಕಿಂತಲೂ ಚಲಚಿತ್ರಗಳು ಬೀರುವ ಪ್ರಭಾವವು ಹೆಚ್ಚಾಗಿರುವುದು ವಾಸ್ತವವಾದ ವಿಷಯ — ನಮ್ಮ ದೇಶದಲ್ಲಿ ಟೆಲಿವಿಜ್ಞ ಇನ್ನೂ ಬರಬೇಕಾಗಿದೆ : ನೃತ್ಯ ನಾಟಕ, ರಂಗಭೂಮಿ, ಸಂಗೀತ ಕಚೇರಿ ಮುಂತಾದವುಗಳು ಇನ್ನೂ ಕ್ಷೀಣಿಸಿದ ಪ್ರಮಾಣದಲ್ಲಿ ನಡೆಯುತ್ತಿದ್ದು ಇಡೀ ನಮುದಾಯ ಕೈ ಎಟುಕುವಂತಹ ವಿನೋದದ ಪ್ರಮುಖ ಮೂಲವಾಗಿದೆ : ಶಕ್ತಿರಹಿತವಾಗಿ ಭಾರತದಲ್ಲಿ ಚಲಚಿತ್ರವು ತನ್ನದೇ ಆದ ವಿಶಿಷ್ಟಸ್ಥಾನವನ್ನು ಗಳಿಸಿಕೊಂಡು ಜನತೆಯ ಮನೋರಂಜನೆಗೆ ಪ್ರಾಮುಖ್ಯವಾದ ಮೂಲವಾಗಿದೆ : ಅಂತೆಯೇ ತನ್ನದೇ ಆದ ವಿಶಿಷ್ಟ ವಿಧಾನದಲ್ಲಿ ಅದು ಉನ್ನತನವನ್ನು ರಂಜಿಸುತ್ತಿದೆ.

ಕೆಲವು ತುಳು ಗಾದೆಗಳು

ಪ್ರಾರಬ್ಧದಿಂದ ಬಂದ ಒಳಿತು ಕೆಡಕುಗಳ ಫಲವನ್ನು ಅನುಭವಿಸಲೇ ತೀರಬೇಕು.

ನಾಚಿಕೆಯೂ ಇಲ್ಲ, ಹೇಸಿಕೆಯೂ ಇಲ್ಲ, ಮಾನವೂ ಇಲ್ಲ, ಮರ್ಯಾದೆಯೂ ಇಲ್ಲ.

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಕ್ಕೆ ಚಂಬಲಿಗರಾಗಿರಿ

ಕರ್ನಾಟಕದಾದ್ಯಂತ ಗೋರಕ್ಷಣೆ, ಪ್ರಾಣಿದಯಾ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ವಿಷಯಗಳ ಪ್ರಚಾರ ಮಾಡಲಪೇಕ್ಷೆ.

ವಾರ್ಷಿಕ ಚಂದಾ 50 ನೈಸೆ "ಗೋರಕ್ಷಣ" ಕ್ಕೆ ಲೇಖನಗಳನ್ನೂ, ಪ್ರೋತ್ಸಾಹಧನವನ್ನೂ ಎಂದಿನಂತೆಯೇ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ ಜನಪ್ರಿಯ 4 ನೇ ವಾರ

ಏಪ್ರಿಲ್ ಫೂಲ್ (ಹಿಂದಿ) **April Fool**

ಸೈರಾಬಾನು, ಜಿಶ್ವಜಿತ್ ಅಭಿನಯಿಸಿರುವ, ಸ್ವಾರಸ್ಯ ಪ್ರಸಂಗಗಳು, ನಕ್ಕು ನಲಿಸುವ ಹಾಸ್ಯ ವೈನೋದ, ನೃತ್ಯ ಸಂಗೀತದಿಂದ ಕೂಡಿದ ಮನೋಲ್ಲಾಸಕರ ಕಲಾಕೃತಿ.
— ಸುಬೋಧ ಮುಖರ್ಜಿಯವರ ಅಮೋಘ ಈಸ್ಟ್‌ಮೆನ್ ಕಲರ್ ಚಿತ್ರ —

ಸಂಗೀತ : ಶಂಕರ್ ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಆನೋಘ 2 ನೇ ವಾರ

❋ ತಾಯಿ ಮಡಿಯಲ್ [ತಮಿಳು]

★

ನಟವರ್ಗ— ಎಂ ಜಿ ರಾಮಚಂದ್ರನ್, ಬಿ ಸರೋಜಾದೇವಿ, ನಂಬಿಯಾರ್
ಎಂ ಆರ್ ರಾಧಾ, ಪಂಡರಿಬಾಯಿ, ಮನೋರಮಾ [ದಿನ 3 ಆಟಗಳು]

SHAKTI
SUDHA

❋

Superb Tonic

ಆಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಸರ್ವತ್ರ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

★

ಚಂದಾ ಕಾಯಿದೆ ಮುಗಿದಿರುವವರು ದಯವಿಟ್ಟು ಕೂಡಲೆ ಚಂದಾ ಕಳುಹಿಸಬೇಕೆಂದು ವಿನಂತಿ.

ರಾಷ್ಟ್ರ ಪಿ ಎಸ್ ನರಸಿಂಹಯ್ಯಂಗಾರ್, ಶ್ರೀ ಪಿ ಎಸ್ ವಿಶ್ವನಾಥ್, ಬಯಸಗರ, ಚೆಂಗಲಪಟ್ಟು
ಶ್ರೀ ಬಿ ಪಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಜಯ್ಯಂಗಾರ್, ಕಾರ್ಯಧರ್ಶಿ ಪ್ರಚಾರಸಭಾ, ಹೊಂಗಸಂದ್ರ
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M. S. Krishna Rao
at the Satyavadi Press, Chamarajapuram, Mysore 4